# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 20-11-2021 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು | 1. ಶ್ರೀ ಜಿ.ನಾರಾಯಣಸ್ವಾಮಿ |
| 2. ಹೆಚ್.ವಿ.ಕೃಷ್ಣಾರೆಡ್ಡಿ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ | 2. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ |
| 3. ಡಾ॥ ಸುಕನ್ಯ, ಆರೋಗ್ಯಾಧಿಕಾರಿಗಳು | 3. ಶ್ರೀ ಕನ್ನಡ ರಾಮು |
| 4. ಡಾ॥ ವೆಂಕಟೇಶ್ ಆರೋಗ್ಯಾಧಿಕಾರಿಗಳು | 4. ಶ್ರೀ ಉಮೇಶ್ |
| 5. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು | 5. ಶ್ರೀ ಪಿ.ಕಿರೀಟಪ್ಪ |
| 6. ಎಸ್.ಚೈತ್ರಾ, ಹಿರಿಯ ಆರೋಗ್ಯ ಪರಿವೀಕ್ಷಕರು | 6. ಶ್ರೀ. ಸ್ವಾಮಿ |
| 7. ಶ್ರೀ ವಿಜಯರಾಜ್ ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು | |
| 8. ಶ್ರೀ. ಮಹಮದ್ ರೆಹಮತುಲ್ಲಾ, ಕೆಲಸ ಪರಿವೀಕ್ಷಕರು | |
| 9. ಶ್ರೀ. ರಾಜಪ್ಪ ಎಂ.ಎಲ್, ಮಾರ್ಷಲ್ | |
| 10. ಶ್ರೀಮತಿ. ತಿಲಗವತಿ, ಲಿಂಕ್ ವರ್ಕರ್ | |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ. 49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆ:-**

ಕೆ.ಎಸ್.ಎಫ್.ಸಿ ಲೇಔಟ್‌ನ ವೆಲ್‌ಫೇರ್ ಅಸೋಸಿಯೇಷನ್ ರವರ ಮನವಿಯಲ್ಲಿ ಸದರಿ ವಾರ್ಡ್‌ನಲ್ಲಿ ಇತ್ತೀಚಿನ ಮಳೆಯಿಂದ ರಸ್ತೆಗಳೆಲ್ಲಾ ಹಾಳಾಗಿದ್ದು ರಸ್ತೆ ತುಂಬಾ ಪಾಟ್‌ಹೋಲ್ಸ್‌ಗಳಿದ್ದು ವಾಹನ ಸಂಚಾರರಿಗೆ ತೊಂದರೆಯಾಗುತ್ತಿರುವುದರಿಂದ ಮುಂದಿನ ಸಭೆಯ ಒಳಗಾಗಿ ಎಲ್ಲಾ ರಸ್ತೆ ಗುಂಡಿಗಳನ್ನು ಮುಚ್ಚುವುದು, ಡಾಂಬರೀಕರಣ, ಪುಟ್‌ಪಾತ್‌ಗಳ ರಿಪೇರಿ ಮತ್ತು ಕೆಟ್ಟುಹೋಗಿರುವ ಬೋರ್‌ವೆಲ್‌ಗಳನ್ನು ಸರಿಪಡಿಸಲು ಕೋರಿದ್ದು, ಅತಿ ಹೆಚ್ಚು ಮಳೆ ಬೀಳುತ್ತಿದ್ದು, ಮಳೆ ನಿಂತಮೇಲೆ ಪೂರ್ತಿಯಾಗಿ ಡಾಂಬರೀಕರಣ ಮಾಡುವುದಾಗಿ ಸಹಾಯಕ ಅಭಿಯಂತರರು ತಿಳಿಸಿದರು, ಹಾಗೂ ಸಹಾಯಕ ಅಭಿಯಂತರರು ಟ್ರಾಕ್ಟರ್ ವ್ಯವಸ್ಥೆ ಇಲ್ಲವೆಂದು ತಿಳಿಸಿದರು, ಎಸ್ಟಿಮೇಟ್ ಮಾಡಲು ತುರ್ತಾಗಿ ಕ್ರಮ ವಹಿಸಲು ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ಸೂಚಿಸಿದರು. ಹಾಗೂ ಸಹಾಯಕ ಅಭಿಯಂತರರು ಹೆಚ್ಚುವರಿ ಪ್ರಭಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ವಾರ್ಡ್‌ಗೆ ಒಬ್ಬರು ಸಹಾಯಕ ಅಭಿಯಂತರರನ್ನು ಖಾಯಂ ಆಗಿ ನಿಯೋಜಿಸಲು ಈಗಾಗಲೇ ಪತ್ರ ಬರೆಯಲಾಗಿದ್ದು, ಮತ್ತೊಮ್ಮೆ ಮಾನ್ಯ ಉಪ ಆಯುಕ್ತರು(ಆಡಳಿತ) ರವರಿಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪು.ತಿ.ನೋ**

Scanned with CamScanner

**ಪೊಲೀಸ್ ಇಲಾಖೆ:-**

ವಾರ್ಡ್‌ನ ವ್ಯಾಪ್ತಿಯಲ್ಲಿ ಹಳೇಗಾಡಿಗಳನ್ನು ಎಲ್ಲಾ ಕಡೆ ಪಾರ್ಕಿಂಗ್ ಮಾಡಿರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿದ್ದು, ಆಕ್ಸಿಡೆಂಟ್ ಆಗಿರುವ, ಕಳ್ಳತನದ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದರಿಂದ ಅಂತಹ ವಾಹನಗಳನ್ನು ಬೇರೆಡೆಗೆ ಸ್ಥಳಾಂತರಿಸಲು /ತೆರವುಗೊಳಿಸಲು ಟ್ರಾಫೀಕ್ ಪೊಲೀಸ್ ಡಿಸಿಪಿ ಪೂರ್ವ ರವರಿಗೆ ಈಗಾಗಲೇ ಪತ್ರ ಬರೆಯಲಾಗಿದ್ದು, ಮತ್ತೊಮ್ಮೆ ಟ್ರಾಫೀಕ್ ಪೊಲೀಸ್ ಡಿಸಿಪಿ ಪೂರ್ವ ರವರಿಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ ಬಗ್ಗೆ:-**

ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಕವರ್‌ಗಳಲ್ಲಿ ಕಸಗಳನ್ನು ತಂದು ಹಾಕುತ್ತಿದ್ದು, ಸಾರ್ವಜನಿಕರು ಸಹಕರಿಸುತ್ತಿಲ್ಲ ಹಾಗೂ ಸರಿಯಾಗಿ ಕಸದ ಸೆಗ್ರಿಗೇಟ್ ಅಗ್ತುತ್ತಿಲ್ಲವೆಂದು ಇದನ್ನು ನಿಯಂತ್ರಿಸಲು ಸದಸ್ಯರು ಕೋರಿರುತ್ತಾರೆ. ವಾರ್ಡ್ ನಂ.49 ಲಿಂಗರಾಜಪುರದ ಹಿರಿಯ ಆರೋಗ್ಯ ಪರಿವೀಕ್ಷಕರು ಈ ಬಗ್ಗೆ ಮಾತನಾಡುತ್ತಾ, ಸದರಿ ವಾರ್ಡ್‌ನಲ್ಲಿ ಈ ಹಿಂದೆ 37 ಬ್ಲಾಕ್‌ಸ್ಪಾಟ್‌ಗಳಿದ್ದು, ಅದರಲ್ಲಿ ಈಗಾಗಲೇ 34 ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದ್ದು, ಬಾಕಿ ಇರುವ 03 ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದೆ ಹಾಗೂ ಸಾರ್ವಜನಿಕರು ಕಸ ಹಾಕದಂತೆ ತಡೆಯುವ ನಿಟ್ಟಿನಲ್ಲಿ ವಾರ್ಡ್ ಸಮಿತಿ ಸದಸ್ಯರು ಸಹಕಾರ ನೀಡಲು ಮನವಿ ಮಾಡಿರುತ್ತಾರೆ.

ಸದರಿ ವಾರ್ಡ್‌ನಲ್ಲಿ ಒಟ್ಟು 25 ಆಟೋ ಟಿಪ್ಪರ್‌ಗಳು, 02 ಕಾಂಪ್ಯಾಕ್ಟರ್ ಇದ್ದು, ಸದರಿ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಸಾವಜನಿಕರಿಗೆ ಮಾಹಿತಿ ನೀಡಲು ಟಿಪ್ಪರ್‌ಗಳಲ್ಲಿ ಆಡೀಯೋ ಜಾಹೀರಾತುಗಳನ್ನು ಹಾಕಲಾಗುತ್ತದೆ. 43 ಮಂದಿ ಪಾಲಿಕೆಯ ಪೌರಕಾರ್ಮಿಕರಿದ್ದು, 26 ಮಂದಿ ಗುತ್ತಿಗೆ ಪೌರಕಾರ್ಮಿಕರು ಸೇರಿ ಒಟ್ಟು 69 ಮಂದಿ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ ಘನತ್ಯಾಜ್ಯ ನಿರ್ವಹಣೆ ಕಾರ್ಯ ನಡಯುತ್ತಿರುವುದಾಗಿ ತಿಳಿಸಿದರು.

**ಕೋವಿಡ್-19 ನಿಯಂತ್ರಣದ ಬಗ್ಗೆ:-**

ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸದಸ್ಯರು ವಿವರವಾದ ಮಾಹಿತಿಗಳನ್ನು ಸಭೆಯ ಮುಂದೆ ಇಡಲು ಆರೋಗ್ಯಾಧಿಕಾರಿಗಳನ್ನು ಕೋರಿದರು.

ಡಾ॥ ಸುಕನ್ಯ ರವರು ಈ ಬಗ್ಗೆ ಮಾತನಾಡುತ್ತಾ ಸದರಿ ವಾರ್ಡ್‌ನಲ್ಲಿ ಸಾರ್ವಜನಿಕರುಗಳು ಸರಿಯಾಗಿ ಮಾಸ್ಕನ್ನು ಹಾಕುತ್ತಿಲ್ಲ ಅವರುಗಳಿಗೆ ಮಾರ್ಷಲ್‌ಗಳ ಮೂಲಕ ದಂಡ ವಿಧಿಸಲು ಕೋರಿದರು. ಸದರಿ ವಾರ್ಡ್‌ನಲ್ಲಿ 56,929 ಜನರಿದ್ದು, ಇದುವರೆಗೆ 73185 ಡೋಸ್ ಕೋವಿಡ್ ನಿಯಂತ್ರಣ ಲಸಿಕೆಯನ್ನು ಹಾಕಲಾಗಿರುತ್ತದೆ. ಈ ಪೈಕಿ ಮೊದಲನೇ ಡೋಸ್ 40594 ಹಾಗೂ 2ನೇ ಡೋಸ್ 32591 ಹಾಕಲಾಗಿರುತ್ತದೆ. ಪ್ರತಿ ದಿನ 150 ಡೋಸ್‌ಗಳನ್ನು ಸರಬರಾಜು ಮಾಡುತ್ತಿದ್ದು, ಈ ವಾರ್ಡ್ ವ್ಯಾಪ್ತಿಯಲ್ಲಿ ಇದುವರೆವಿಗೆ 1013 ಕೋವಿಡ್ ಕೇಸ್‌ಗಳು ದಾಖಲಾಗಿದ್ದು, ಸಕ್ರೀಯ ಪ್ರಕರಣಗಳು ಇರುವುದಿಲ್ಲ ಈ ವಾರ್ಡ್‌ನಲ್ಲಿ ಇಲ್ಲಿಯವರೆವಿಗೆ 39 ಡೆತ್ ಪ್ರಕರಣಗಳು ದಾಖಲಾಗಿರುತ್ತವೆ ತಮ್ಮ ವ್ಯಾಪ್ತಿಯಲ್ಲಿ 15 ಬ್ಲಾಕ್‌ಗಳಿದ್ದು, ಮನೆ ಮನೆ ಸರ್ವೆ ಮಾಡಿ ವ್ಯಾಕ್ಸಿನೇಷನ್ ಕ್ರಮ ಕೈಗೊಳ್ಳಲಾಗಿರುತ್ತದೆ.

ಪು.ತಿ.ನೋ,

Scanned with CamScanner

ಎಲ್ಲಾ ಶಾಲಾ-ಕಾಲೇಜ್‌ಗಳಲ್ಲಿ, ಕಾರ್ಮಿಕ ಕಟ್ಟಡಗಳಲ್ಲಿ, ಕಾರ್ಖಾನೆಗಳಲ್ಲಿ ಕೋವಿಡ್ ಲಸಿಕೆಗಳನ್ನು ಹಾಕಲಾಗುತ್ತಿದೆ. ಸದರಿ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರು ಹಾಗೂ ಇತರೆ ಕೆಲಸಗಾರರಿಗೆ 02 ಡೋಸ್ ಲಸಿಕೆಗಳನ್ನು ಹಾಕಲಾಗಿರುತ್ತದೆ ಮತ್ತು ಪೌರಕಾರ್ಮಿಕರುಗಳಿಗೆ ಕೋವಿಡ್ ಲಸಿಕೆ ಪಡೆದಿರುವ ಬಗ್ಗೆ ಕೋವಿಡ್ ಲಸಿಕೆ ಪ್ರಮಾಣ ಪತ್ರ ನೀಡಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು, ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೆ ಹಾಗೂ ಸಿಬ್ಬಂದಿಗಳಿಗೆ ಪ್ರತಿ ಮಾಹೆ ಜನರಲ್ ಮೆಡಿಕಲ್ ಚೆಕಪ್ ಮಾಡುತ್ತಿರುವುದಾಗಿ ಆರೋಗ್ಯ ಸಿಬ್ಬಂದಿ ತಿಳಿಸಿದರು.

ಸದರಿ ಸ್ಥಳಗಳಲ್ಲಿ ಲಸಿಕೆ ಕಾರ್ಯಕ್ರಮ ಇರುವ ದಿನಾಂಕ ಹಾಗೂ ಸ್ಥಳದ ವಿವರಗಳೊಂದಿಗೆ Group Whats app ನಲ್ಲಿ ಹಂಚಿಕೊಳ್ಳಲು ಸಂಬಂಧಪಟ್ಟ ಆರೋಗ್ಯವೈದ್ಯಾಧಿಕಾರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕೋವಿಡ್-19 ನಿಂದ ಮೃತಪಟ್ಟವರ ಅವಲಂಬಿತರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಬಿಪಿಎಲ್‌ದಾರರಿಗೆ ರೂ.1,50,000/- ಎಪಿಎಲ್‌ದಾರರಿಗೆ ರೂ.50,000/- ಘೋಷಿಸಿದ್ದು, ಅದರಂತೆ ಸದರಿ ವಾರ್ಡ್‌ನಲ್ಲಿ 39 ಜನ ಕೋವಿಡ್ ನಿಂದ ಮೃತಪಟ್ಟಿದ್ದು, ಈ ಪೈಕಿ 25 ಜನರ ಅವಲಂಬಿತರಿಂದ ಅರ್ಜಿಗಳನ್ನು ಪಡೆಯಲಾಗಿದ್ದು, ಉಳಿಕೆ ಅರ್ಜಿಗಳನ್ನು ಪಡೆದು ಅಗತ್ಯ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು**

ಕೆ.ಎಸ್.ಎಫ್.ಸಿ ಬಡಾವಣೆಯ ಸ್ಮಶಾನದ ಬಳಿ ಹಾಗೂ ಇನ್ನಿತರೆ ಕಡೆ ಬೀದಿ ದೀಪಗಳು ಉರಿಯುತ್ತಿಲ್ಲ ಈ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಕೋರಿದರು.

ಈ ಬಗ್ಗೆ ಪರಿಶೀಲಿಸಿ, ಎಲ್ಲೆಲ್ಲಿ ದೀಪಗಳು ಉರಿಯುತ್ತಿಲ್ಲವೋ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ವಿದ್ಯುತ್ ಗುತ್ತಿಗೆದಾರರಿಗೆ ಹಾಗೂ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರಿಗೆ ತಿಳಿಸಲು ಸದಸ್ಯ ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಸಭೆಯು 12-00 ಗಂಟೆಗೆ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

20.11.21

ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

**ಪು.ತಿ.ನೋ,**

Scanned with CamScanner

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ,
3. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಅವಗಾಹನೆಗೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್ಬಿ ರವರ ಅವಗಾಹನೆಗೆ ರವಾನಿಸಿದೆ.
7. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
8. ಕಛೇರಿ ಕಡತಕ್ಕೆ.

Scanned with CamScanner